ಹೊರಟ ಈ ಸೃಜನಶೀಲ ಬಿಂಬಗಳು – ಕೈಲಾಸವೇ ಕಾಯಕವಾದ ಗೋಕರ್ಣದಿಂದ ಹೊರಟು, ಕಾಯಕವೇ ಕೈಲಾಸವಾದ ಮುಂಬಯಿ ತಲುಪುತ್ತವೆ.

ಒಬ್ಬ ಕವಿಯ ಪಾಲಿಗೆ ಹುಟ್ಟೂರೆಂದರೆ ಬರೀ ನೆಲದ ಹೆಸರುಗಳಲ್ಲ. ಬದಲಿಗೆ ಕವಿಯ ಸಾಹಿತ್ಯದ ಹುಟ್ಟಿನ ಜೀವ ಸೆಲೆಯ ತಾಣಗಳು. ಅದರ ಚೈತನ್ಯಕ್ಕೆ ನಿರಂತರ ಜೀವಸೆಲೆಯಾಗಿ ನಿಂತ ಮೂಲಭೂತ ಪ್ರೇರಕಗಳು.
ಜಯಂತರ ಸಾಹಿತ್ಯದ ಘಮ ತುಂಬಿಕೊಂಡ ಇದೇ ರಥಬೀದಿಯಲ್ಲಿ 'ಪಮ್ಮೇಚನ ಶಿವರಾತ್ರಿ' ಜಾತ್ರೆ ನೆರೆಯುತ್ತದೆ. ಬಯಲು ಸೀಮೆಯಿಂದ ಜಾತ್ರೆಗೆಂದೇ ತೆರೆಯುವ 'ಚೈತನ್ಯ ವಿಲಾಸ' ಹೋಟೆಲು, ಅದರ ಪಕ್ಕ ಕುಳಿತಿರುವ ಒಬ್ಬ ಭೈರಾಗಿ ಅದೇ ಹೋಟೇಲಿನ ಒಂದು ಖಡಕ್ ಚಾ ಕುಡಿಯುತ್ತ ಬೀಡಿ ಅಂಟಿಸಿ ಮುಖಕ್ಕೆ ಭಸ್ಮ ಬಳಿಯುತ್ತಿರುವ ಚಿತ್ರ.

ಶಿವಶರಣಯ್ಯ ಎಂಬ ಕಣ್ಣು ಕಾಣದ ಅಥವ ಕೇವಲ ಒಳಗಣ್ಣು ಹರಿತವಾಗಿರುವ ನಾಟಕದ ಮೇಷ್ಟ್ರು ಪಮ್ಮೇಚನೊಂದಿಗೆ ಟೀ ಕುಡಿಯುತ್ತ, ಜಾತ್ರೆಯ ದಟ್ಟಣೆಯಲ್ಲೂ ಕೈ ಹಿಡಿದು ಈಗ ಶರಣಯ್ಯನವರನ್ನು ಅಲ್ಲಿ ಇಲ್ಲಿ ಕರೆದುಕೊಂಡು ಹೋಗುತ್ತ ಬಂಗಲೇ ಗುಡ್ಡ, ರಾಮತೀರ್ಥ, ಜಟಾಯುಗುಡ್ಡ, ಎಲ್ಲಿ ಹೋದರೂ ಮಾಣೇಶ್ವರದ ಮೆಟ್ಟಿಲುಗಳ ಮೇಲೆ ಬಂದು ಕೂಡುವ ಆ ಸಂಜೆ. ಅಲ್ಲಿಂದ ಸುದೀರ್ಘ ಸಮುದ್ರದ ಕಿನಾರೆಯನ್ನು ಹೀರುತ್ತ ಶರಣಯ್ಯ 'ಇಲ್ಲಿಂದ ಸಮುದ್ರ ಛಲೋ ಕೇಳಿಸ್ತದಲ್ಲ' ಎನ್ನುತ್ತ, 'ನಿಮ್ಮ ಸಮುದ್ರಾನ ನನ್ನ ಕಿವಿಯಾಗ ಕಟಗೊಂಡು ನಮ್ಮ ಬಯಲ ಸೀಮಿಗೆ ಒಯ್ತೀನಿ' ಅನ್ನುತ್ತ... ಒಂದು ಸಲ ಪಮ್ಮೇಚನಿಗೆ ಬೇಸರವಾದಾಗ 'ಛೇ ಛೇ ಸಮುದ್ರದ ಬಾಜೂಕ್ಕೆ ಇರ್ತಿದೀ ಮನಸು ಸಣ್ಣ ಯಾಕೆ ಮಾಡ್ತೀ, ಮನಸು ತೆರಿ ಎಲ್ಲಾ ನೀನಿದ್ದಲ್ಲೆ ಬರ್ತದೆ' ಎನ್ನುವ ದನಿಯ ಬನಿ...

ಮಹಾಬಲೇಶ್ವರ ದೇವಸ್ಥಾನದಿಂದ ತುಸು ಮುಂದೆ ಹೋದರೆ ಎಡಕ್ಕೆ ಒಂದು ತಿರುವು ಸಿಗುತ್ತದೆ. ತಿರುವಿನಲ್ಲಿ ಮುಂದೆ ಹೋದರೆ ಒಂದು ಸಣ್ಣ ಚಾಳಿನಂತ ಮನೆಗಳ ಬೀದಿ. ಎಲ್ಲರ ಮನೆ ಮುಂದೆ ಒಂದು ತುಳಸೀ ಗಿಡ, ಚಿತ್ತಾರದ ರಂಗೋಲಿ. ಇನ್ನೇನು ಈ ಬೀದಿ ಸಮುದ್ರ ಸೇರುತ್ತದೆ ಎನ್ನುವಂತಹ ಗಳಿಗೆಯಲ್ಲೇ, ಅಥವ ಅಲೆಗಳ ಸದ್ದು ಕೇಳುವವಷ್ಟು ಹತ್ತಿರದಲ್ಲೇ ಇರುವ 'ಗೌರೀಶ ಕಾಯ್ಕಿಣಿ' ಎಂಬ ಅತೀ ಪುರಾತನ ಬೋರ್ಡು ಹೊತ್ತ ಜಯಂತರ ಮನೆಯಿದೆ. ಮನೆಯ ಮುಂದೆ ಸೇದುವ ಬಾವಿ, ತುಳಸೀ ಗಿಡ. ಅಂಗಳದಲ್ಲಿ ರಂಗೋಲಿ ಮಾತ್ರ ಇಲ್ಲ. ಆ ಒಂದು ಬೆಳಗಿನ ಸಣ್ಣ ಮೌನದಲ್ಲಿ ಅಂಗಳದ ತೆಂಗಿನ ಗರಿಗಳ ಹಾಗು ಅಲೆಗಳ ಮಂದ್ರ ಸಂಗೀತ ಮಾತ್ರ ಎಲ್ಲೋ ಸ್ವಪ್ನದಲ್ಲಿ ಕಳೆದುಹೋದಂತಹ ಅನುಭವ.

ಕೆಲವೇ ದೂರದ ಕಣ್ಣಳತೆಯಲ್ಲಿ ಬೇಲೆ, ಬೇಲೆಯ ದಂಡೆಯಲಿ ಸೌದೆ ಆಯಲೆಂದೇ ದೌಡಾಯಿಸಿದ ಜಂಗುಳಿ, ತುಸುದೂರದಲ್ಲಿ ಅಲ್ಲೊಂದು ಇಲ್ಲೊಂದು ಮೀನುಗಾರರ ಕಿರುದೋಣಿಗಳು, ಖಾಲೀ ಬುಟ್ಟಿ ಹೊತ್ತುಕೊಂಡು ಮೀನಿನ ದೋಣಿಗೆ ಕಾಯುತ್ತಾ ನಿಂತ ಹೆಂಗಸರು.

ಇಲ್ಲೆಲ್ಲೋ ತುಸು ಅಂತರದಲ್ಲೇ ಜಯಂತರ ಕತೆಯ ಪಾತ್ರಗಳು ಓಡಾಡಿದಂತೆ... ಸೀತಮ್ಮನ ಮನೆ, ಮನೆಗೆಲಸದ ದುಗ್ಗಿ, ರೂಪಿಯೆಂಬ ನಾಯಿ, ಸೀತಮ್ಮನ ಗಂಡ ಮಧುಕರನ ಸಿಟ್ಟು... ಎಲ್ಲರೂ ಅಲ್ಲೇ ಎಲ್ಲೋ ಪಿಸುಗುಟ್ಟಿದಂತೆ ಭಾಸವಾಗುತ್ತದೆ. ಶಾಲೆಯೆಂಬ ರೈಲು ಹತ್ತಿ ಹೋದ ಮಗ ಮಧುಕರ, ಇಡೀ ದೊಡ್ಡ ಮನೆಯ ಕತ್ತಲೆಯನ್ನು ಆಸ್ವಾದಿಸುವ ಸೀತಮ್ಮ, ಕಡಲಿನ ಉದ್ಘೋಷವನ್ನೇ ಜೋಗುಳವನ್ನಾಗಿ ಮಾಡಿಕೊಂಡು ನಿರಾಯುಧ ಕಡಲಿನೊಂದಿಗೆ ಕದನಕ್ಕಿಳಿದ ಯೋಧನಂತೆ ಸೌದೆ ಆಯುವ ದುಗ್ಗಿಯ ತಂದೆ... ಕಥೆ–ಕಾವ್ಯದ ಆವರಣದೊಳಗೆ ನೆನಪುಗಳು ಜಿಗಿಯುತ್ತವೆ.

ಅಲ್ಲಿಂದ ತುಸು ದೂರ ನಡೆದರೆ ರಾಮತೀರ್ಥದ ದಾರಿ. ಆ ದಾರಿಯ ಒಂದು ಬದಿಯಲ್ಲಿ ಬೆಳೆದ ಕೇದಿಗೆ, ಇನ್ನೊಂದು ಬದಿ ಮೊರೆಯುವ ಅಲೆಗಳು. ಮಾಣೇಶ್ವರದ ಮೆಟ್ಟಿಲುಗಳು. ಇದೇ ಮೆಟ್ಟಿಲುಗಳನ್ನೇರುತ್ತ ಶರಣಯ್ಯ ಮೇಷ್ಟ್ರು ಪಮ್ಮೇಚನಿಗೆ ನಿಮ್ಮೂರಿನಲ್ಲಿ ಬರೀ ಮೆಟ್ಟಿಲುಗಳೇ ಇವೆ ಎಂದು ಹೇಳುತ್ತಿರುವಂತೆ...

ರಾಮತೀರ್ಥದ ಪ್ರಸಾದ ಸೇವಿಸಿ, ಕಡಲಿನಲ್ಲಿ ಮನಸೋಚ್ಛೆ ಈಜಿ, ಗೋಕರ್ಣವೆಂಬ ಕೈಲಾಸ ಬಿಡುವಾಗ ಇಳಿಸಂಜೆ. ಶಿವರಾತ್ರಿ ಮುಗಿದ ನಂತರದ ಕವಿಯುತ್ತಿದ್ದ ಮಬ್ಬುಗತ್ತಲೆಯಂತಹ ದುಃಖವನ್ನು ಹೊತ್ತು ಸ್ವಪ್ನದಿಂದ ಹೊರಗೆ ಬರುವವರಂತೆ ಬೆಂಗಳೂರಿನ ದಾರಿ ಹಿಡಿದೆವು. ದಾರಿಯುದ್ದಕ್ಕೂ ರಥಬೀದಿ ಹಿಂಬಾಲಿಸಿದ ಗುಂಗು, ಆ ಬೀದಿಯೊಂದಿಗೆ ಜಯಂತರ ಕಥೆ–ಕವಿತೆಯ ಬಿಂಬಗಳು ಕೂಗಿ ಕರೆದಂತೆ...

# ಮಿಥಾಲಿಗೆ ನೋವು ಸಹಜವೇ... ಆದರೆ...

**ಅಂತರರಾಷ್ಟ್ರೀಯ ಮಹಿಳಾ ಕ್ರಿಕೆಟ್‌ನಲ್ಲಿ 5000ಕ್ಕೂ ಹೆಚ್ಚು ರನ್ ಗಳಿಸಿರುವ, ವಿಶ್ವದ ಎರಡನೇ ಆಟಗಾರ್ತಿ ಎಂಬ ಅಗ್ಗಳಿಕೆಯ ಮಿಥಾಲಿ ರಾಜ್ ಅವರನ್ನು 'ಮಹಿಳಾ ಸಚಿನ್ ತೆಂಡೂಲ್ಕರ್' ಎಂದೂ ಕರೆಯಲಾಗುತ್ತದೆ. ಅವರಿಗೀಗ ಬೇಸರದ ಪರ್ವ. 'ತಮಗೆ ಅನ್ಯಾಯವಾಗಿದೆ' ಎನ್ನುವ ಅವರ ಮನಸ್ಸಿನಲ್ಲಿನ ಕಹಿಯನ್ನು ತೊಡೆಯುವ ಹೊಣೆಗಾರಿಕೆ ಬಿಸಿಸಿಐ ಮೇಲಿದೆ.**

**■ ವಿಶಾಖ ಎನ್.**

ಮಹಿಳೆಯರ ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್‌ನ ಸೆಮಿಫೈನಲ್ಸ್‌ನಲ್ಲಿ ಭಾರತದ ಹೆಣ್ಣುಮಕ್ಕಳು ಇಂಗ್ಲೆಂಡ್ ಎದುರು ಸೋತದ್ದಕ್ಕಿಂತ, ಅನುಭವಿ ಮಿಥಾಲಿ ರಾಜ್ ವ್ಯಕ್ತಪಡಿಸಿರುವ ಅಸಮಾಧಾನ ಹೆಚ್ಚು ಸದ್ದು ಮಾಡಿದೆ. ಇಪ್ಪತ್ತು ವರ್ಷ ದೇಶಕ್ಕಾಗಿ ಆಡಿದ ತಮ್ಮ ಬದುಕಿನ ಅತಿ ಕೆಟ್ಟ ದಿನಗಳಿವು ಎಂದಿರುವ ಮಿಥಾಲಿ, ಖಿನ್ನರಾಗಿರುವುದಾಗಿಯೂ ಹೇಳಿಕೊಂಡಿದ್ದಾರೆ. ತಂಡದ ಕೋಚ್ ರಮೇಶ್ ಪೊವಾರ್, 'ಮಿಥಾಲಿ ಉದಾಸೀನ ಧೋರಣೆಯವರು. ವ್ಯಕ್ತಿಗಿಂತ ನನಗೆ ದೇಶ ಮುಖ್ಯ' ಎಂಬರ್ಥದ ಮಾತನ್ನಾಡಿದ್ದಾರೆ.

ಕ್ರಿಕೆಟ್‌ನಲ್ಲಿ ಆಡುವ ಹನ್ನೊಂದು ಮಂದಿಯ ಆಯ್ಕೆ ತಂಡದ ವ್ಯವಸ್ಥಾಪಕ ಸಮಿತಿಗೆ ಸೇರಿದ್ದು. ಅದರಲ್ಲಿ ತರಬೇತುದಾರ ಹಾಗೂ ನಾಯಕಿಯ ಪಾತ್ರವೇ ಮುಖ್ಯ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಆಡಳಿತ ಸಮಿತಿ (ಸಿಒಎ) ಸದಸ್ಯೆಯಾದ